ಆರ್. ಮಧುಸೂದನ್, ಹಾಸನ

*ವಾಟಾಳ್‌ರನ್ನು ಮುಂದಿನ ರಾಷ್ಟ್ರಪತಿಯಾಗಿ ಕೂರಿಸಿದರೆ ಪರಿಣಾಮ ಏನಾಗಬಹುದು?*



ಪಾಪ! ಆ ಉಟ್ಟು ಓರಾಟಗಾರನಿಗೆ ಆ ಪೀಠದ ವಾಟವೂ ತಿಳಿಯುವುದಿಲ್ಲ, ಆಳವೂ ತಿಳಿಯುವುದಿಲ್ಲ!

ಮನೋರಮಾ ಪ್ರಭು, ಕಾಸರಕೋಡ

*ಪ್ರೇಮಿಗಳ ಮಧ್ಯೆ ಜಾತಿಯ ಭೂತ ಏಕೆ?*

ಸಮಾಜ ಇರುವುದೇ ಕಟ್ಟುಪಾಡುಗಳಲ್ಲಿ; ಕಟ್ಟು ಜಾತಿಯದು, ಪಾಡು ಪ್ರೇಮಿಗಳದು!

ಕಲಾವಿದ ಸೀನು, ಚಿತ್ರದುರ್ಗ

*ಹುಡುಗಿಯರು ತಮಗೆ ಖುಷಿಯಾದಾಗಲೂ, ದುಃಖವಾದಾಗಲೂ ಹಾಸಿಗೆಯ ಮೇಲೆ ದೊಪ್ಪನೆ ಬೀಳುವರಲ್ಲಾ, ಕಾರಣವೇನು?*

ಬದುಕು ಭಾವದ ಬಂಡಿ ಮನವದರ ಸಾಹೇಬ ಚದುರೆ ನೀನ್ ಹದವರಿತು ನಡೆವಾಕೆ ದುಗುಡಕೋ ಮೋದಕೋ ನಡೆ ತಪ್ಪದೆಡೆ ನೀನು ಪದ ಕುಸಿಯೆ ಹಾಸಿಹುದು ನೋಯದಂತೆ ಎಂಬ ನುಡಿಯೇ ಕಾರಣವಂತೆ!

ಎ.ಕೆ. ಪಟ್ಟಾಭಿ, ಬೆಂಗಳೂರು

*ಇಲ್ಲೊಬ್ಬ ಗಂಡ ಮನೆಯಲ್ಲಿ ಹೆಂಡತಿ ಇಲ್ಲದಿರುವಾಗ ಜಿರಳೆಗಳು ಹೆಚ್ಚಾಗುವಂತೆ ಆಸ್ಥೆ ವಹಿಸುತ್ತಿರುವನಲ್ಲಾ, ಏಕಿರಬಹುದು?*



ಗಿರಿಜಾಮೀಸೆಗೆ ಹೆದರದ ಹೆಂಡತಿ ಜಿರಳೆ ಮೀಸೆಗೆ ಹೆದರುವಳಂತೆ!

ಆರಿಫ್, ದಾವಣಗೆರೆ

*ಹುಡುಗಿಯರು ಹೆಚ್ಚಾಗಿ ತಲೆ ತಗ್ಗಿಸಿಕೊಂಡು ನಡೆಯುತ್ತಾರಲ್ಲಾ, ಏಕೆ?*

ಕಣ್ಣು – ಕಣ್ಣು ಕಲೆತರೆ ಡ್ಯುಯೆಟ್ ಹಾಡಲು ಹಾತೊರೆಯುವವರು ಹೆಚ್ಚಾದ್ದರಿಂದ!

ಕೆ. ಮೈಥಿಲಿಕೃಷ್ಣ, ಬೆಂಗಳೂರು

*ರಾಜಕಾರಣಿ ಬೆಳೆಯಬೇಕಾದರೆ ಏನನ್ನು ಬಿಡಬೇಕು?*

ಪ್ಯಾಕೆಟ್ ಹಂಚಲು, ಹಣ ಹಂಚಲು, ಭಯ ಹಂಚಲು ಚೇಲಾಗಳನ್ನು ಬಿಡಬೇಕು!

ಎಂ.ಆರ್. ವಿರೂಪಾಕ್ಷಯ್ಯ, ಗದಗ

*ಲೇಡೀಸ್ ಟೈಲರಿಂಗ್ ಕೆಲಸಕ್ಕೆ ಪುರುಷರೇ ಯಾಕೆ ಹೆಚ್ಚು?*

ಟೇಪ್ ಹಿಡಿಯದೆಯೇ ಶೇಪ್ ತಿಳಿಯುವ ಗುಣ ಇರುವುದರಿಂದ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಮೂರ್ಖರೆಲ್ಲರೂ ಏನು ಕೇಳಿದರೂ ಇಲ್ಲ/ಅಲ್ಲ/ಗೊತ್ತಿಲ್ಲ ಎಂದೇ ಉತ್ತರ ಹೇಳುತ್ತಾರೆ. ನೀವೂ ಆ ಗುಂಪಿಗೆ ಸೇರಿದವರೆ?*

ಇಲ್ಲ, ಕ್ಷಮಿಸಿ, ಆ ಗುಂಪಿನವನೇ...ಅಲ್ಲ, ಅಲ್ಲ....ನನಗೂ ಸರಿಯಾಗಿ ಗೊತ್ತಿಲ್ಲ!

ಗೀತಾ ಬರ್ಲ, ಬೆಂಗಳೂರು

*ಬಸ್‌ಗಳಲ್ಲಿ ಹೆಚ್ಚಾಗಿ ಚಾಲಕನ ಹಿಂದಿನ ಆಸನಗಳನ್ನೇ ಮಹಿಳೆಯರಿಗೆ ಮೀಸಲಾಗಿರಿಸುವುದೇಕೆ?*

ಕನ್ನಡಿಯಲ್ಲಿ ಕದ್ದು ನೋಡಲಾದರೂ ಡ್ರೈವರ್ ನಿದ್ರಿಸದೆ ಎದ್ದಿರುತ್ತಾನೆಂದು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಸಮಸ್ಯೆ ಬಂದಾಗಲೆಲ್ಲ ಅದರ ಹೊಣೆಗಾರಿಕೆಯನ್ನು ಮತ್ತೊಬ್ಬರಿಗೆ ವರ್ಗಾಯಿಸುತ್ತಾರಲ್ಲಾ...?*

ಸಮಸ್ಯೆ ಶವವಿದ್ದಂತೆ; ಅದನ್ನು ಎಲ್ಲರೂ ಹೊರಲಾರರು, ಹೊರುವಂತಿಲ್ಲ!

ಪೇಂಟರ್ ಪಾಪು, ಸಂತೇಮರಹಳ್ಳಿ

*ಕನಸು ಇರುವವನಿಗೆ ನಿದ್ದೆ ಬರೋಲ್ಲ, ಯಾಕೆ?*

ಆ ಕನಸು ಸೊಳ್ಳೆ, ತಿಗಣೆ, ಇರುವೆ, ಗೊದ್ದ, ಹೆಂಡತಿಗಿಂತಲೂ ಹೆಚ್ಚಿಗೆ ಕಾಡುವುದರಿಂದ!

ಹಾಡ್ಯ. ಬಿ. ಜಯಾನಂದ, ಮೈಸೂರು

*ಜನಸಾಮಾನ್ಯರ ಗೃಹಕಲಹಕ್ಕೂ, ವಿಐಪಿಗಳ ಗೃಹಕಲಹಕ್ಕೂ ಏನು ವ್ಯತ್ಯಾಸ?*

ಜನಸಾಮಾನ್ಯರ ಗೃಹಕಲಹ ತೋರಿಸಿದರೆ ಒಳ್ಳೆಯ ಟಿಆರ್‌ಪಿ ದೊರಕುವುದಿಲ್ಲ!

ವೀರೇಂದ್ರ ಎಂ. ಮೇಗೂರ, ಧಾರವಾಡ

*ಕಪ್ಪು ಬಣ್ಣದವರಲ್ಲಿ ಲಕ್ಷ್ಮಿ ತಾಂಡವವಾಡುತ್ತಾಳಂತೆ, ನಿಜವೆ?*

ಕಪ್ಪುಬಣ್ಣದ ಲಕ್ಷ್ಮಿ ಇರುವಲ್ಲಿ ಲೋಕಾಯುಕ್ತ ತಾಂಡವವಾಡುವುದಂತೂ ಸತ್ಯ!

## ಬಹುಮಾನಿತ ಪ್ರಶ್ನೆ

ಉದಯಶಂಕರ ರಾವ್, ದೊಡ್ಡಬಳ್ಳಾಪುರ

*ಇಂದ್ರ, ಅಗ್ನಿ, ವರುಣರಂತೆ ನಮ್ಮ ಮಂತ್ರಿಗಳ ಕೈಯಲ್ಲೂ ಮಳೆ ಗಾಳಿ ಸುರಿಸುವ ಶಕ್ತಿ ಇದ್ದಿದ್ದರೆ?*

ವಿರೋಧಪಕ್ಷದವರ ಬಹಿರಂಗ ಸಭೆಗಳೆಲ್ಲಾ ಕೊಚ್ಚಿಹೋಗುತ್ತಿದ್ದವು!

ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ

*ಅತ್ತೆ – ಸೊಸೆಯರ ಜಗಳಕ್ಕೂ, ಅತ್ತಿಗೆ–ನಾದಿನಿಯರ ಜಗಳಕ್ಕೂ ವ್ಯತ್ಯಾಸ?*

ಅತ್ತೆ–ಸೊಸೆಯರದು ಸ್ಟೇಟ್‌ಲೆವೆಲ್ ಕಾಂಪಿಟೆಷನ್, ಅತ್ತಿಗೆ–ನಾದಿನಿಯರದು ಲೋಕಲ್ ಲೆವೆಲ್ ಕಾಂಪಿಟೆಷನ್!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ನಿಮ್ಮ ಹೆಸರಿನಲ್ಲಿ ಮಂಗಳಾರತಿ ಯಾಕೆ ಮಾಡಬಾರದು ಎಂದು ಪೂಜಾರಿ ನಿಮ್ಮನ್ನು ಕೇಳಿದರೆ ಏನು ಹೇಳುವಿರಿ?*

ಮನೆಯಿಂದಲೇ ಬರುತ್ತಿದ್ದೇನೆ, ಸರಿಯಾಗಿ ಮಂಗಳಾರತಿ ಆಗಿದೆ!

ರಾಜೇಂದ್ರ ಕುಮಾರ್, ದೊಡ್ಡಬಳ್ಳಾಪುರ

*ಬೀಚುಗಳನ್ನು ಸುತ್ತುತ್ತಿದ್ದ ಮಲ್ಯ ಈಗ ದೇವಸ್ಥಾನಗಳನ್ನು ಸುತ್ತುತ್ತಿದ್ದಾರಲ್ಲಾ...?*



ತೀರದ ದಾಹ ಹೋಗಿ ತೀರ್ಥದ ದಾಹ ಶುರುವಾಗಿದೆಯಂತೆ!

ಜಿ. ವಿಶ್ವನಾಥ, ಗೊಂಡೇದಹಳ್ಳಿ

*ನಂಬಿ ಕೆಟ್ಟವರಿಲ್ಲ ಎನ್ನೋ ಗಾದೆಮಾತು ಇತ್ತೀಚೆಗೆ ಸುಳ್ಳಾಗುತ್ತಿದೆಯಲ್ಲ?*

ನಿಜವಾಗಿಯೇ ಇದೆ; ನಂಬಿ ಕೆಟ್ಟವರು ಇಲ್ಲ ಎಂದರೆ ಹೋಗಿಬಿಟ್ಟಿದ್ದಾರೆ ಎಂಬುದೇ ಅದರ ಸರಿಯಾದ ಅರ್ಥ!

ಎಸ್. ಶ್ರೀಧರ್, ಬೆಂಗಳೂರು

*ಬದುಕಲು ಎಲ್ಲಾ ಮಾರ್ಗಗಳು ಮುಚ್ಚಿದಾಗ ಏನು ಮಾಡಬೇಕು?*

ಆತ್ಮವಿಶ್ವಾಸದ ಗರಗಸದಿಂದ ಅವಕಾಶದ ಕಿಡಿಯನ್ನು ಕೊರೆದು ಅಂಜದೆ ಅಡಿಯಿಡಬೇಕು!

ಪಿ.ಜೆ. ರಾಘವೇಂದ್ರ, ಮೈಸೂರು

*ಕೋರ್ಟು, ಕಾನೂನು, ಜೈಲು, ಇದ್ದರೂ ಸಹ ಅಪರಾಧಗಳು ಕಡಿಮೆಯಾಗುತ್ತಿಲ್ಲ ಏಕೆ?*

ಪೊರಕೆ, ವ್ಯಾಕ್ಯೂಮ್ ಕ್ಲೀನರ್‌ಗಳು ಎಷ್ಟೇ ಇದ್ದರೂ ನಿರಂತರವಾಗಿ ಧೂಳು, ಕಸ ಇರುವುದು ಪ್ರಕೃತಿ ನಿಯಮ!

■ ರಾಮ್